
# ಬೆಳಕಿನ ಸಂಚಲನ

ಸಂಪುಟ 8, ಸಂಚಿಕೆ 2 | ದ್ವೈಮಾಸಿಕ ವಾರ್ತಾಪತ್ರ | ಮಾರ್ಚ್–ಏಪ್ರಿಲ್ 2020



**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ಸೆಪ್ಟೆಂಬರ್ 29, 2002)

**ಅನು: ಶ್ರೀದೇವಿ**

ಈ ಜೀವನವನ್ನು ಸಂಭ್ರಮಿಸಬೇಕು. ಈ ಜೀವನ ಒಂದು ಉಡುಗೊರೆ. ಈ ಜೀವನ ಒಂದು ಅವಕಾಶ, ವಿಕಾಸಗೊಳ್ಳಲು ಹಾಗೂ ಅನುಭವ ಪಡೆಯಲು ಇದು ಒಂದು ಅವಕಾಶ. ಈ ವಿಷಯದ ಬಗ್ಗೆ ನಮಗೆ ಅರಿವಿಲ್ಲ ಅಥವಾ ನಾವು ಅದಕ್ಕೆ ಪ್ರಾಮುಖ್ಯತೆ ನೀಡುವುದಿಲ್ಲ ಎಂದು ನನಗನಿಸುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರಿಗೂ ಸಮಸ್ಯೆಗಳಿವೆ, ನಮ್ಮದೇ ಆದ ಸಮಸ್ಯೆಗಳು, ವೈಯಕ್ತಿಕ ಸಮಸ್ಯೆಗಳ ರಾಶಿಗಳೇ ಇವೆ. ಈ ಸಮಸ್ಯೆಗಳು, ಬದುಕಿನ ಸಮಸ್ಯೆಗಳು, ಜೀವನ ನಡೆಸುವ ಸಮಸ್ಯೆಗಳು ಇದ್ದರೂ ಕೂಡ, ಜೀವನವನ್ನು ಸಂಭ್ರಮದಿಂದ ನಡೆಸಬಹುದು. ಇವೆಲ್ಲವುಗಳ ನಡುವೆಯೂ ನಾವು ವಿಕಾಸಗೊಳ್ಳಬಹುದು. ಯಾವುದೇ ಪರಿಸ್ಥಿತಿಯಲ್ಲಿಯೂ ಕೂಡ ನಾವು ವಿಕಾಸಗೊಳ್ಳಬಹುದು. ಈ ಅಂಶವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು ಹಾಗೂ ಪ್ರಯತ್ನಿಸಬೇಕು. ನಾವು ಯಾವಾಗಲೂ ಹಸನ್ಮುಖರಾಗಿರಬಹುದು, ಯಾವಾಗಲೂ ಬದುಕಬಹುದು, ಆದರೆ ನಮ್ಮಲ್ಲಿ ಬಹುತೇಕ ಜನರು ಈ ಸಮಸ್ಯೆಗಳನ್ನು ಭಾರೀ ಹೊರೆಗಳಂತೆ ಪರಿಗಣಿಸಿ ಸೋಲೊಪ್ಪಿಕೊಳ್ಳುತ್ತೇವೆ. ನಾವು ಈ ಜೀವನದ ಭಾರೀ ಸಮಸ್ಯೆಗಳಿಗೆ ಶರಣಾಗುತ್ತಾ ಹೋಗುತ್ತೇವೆ. ಬದುಕು ಒಂದು ಸವಾಲು; ಎಲ್ಲಾ ಸಮಯದಲ್ಲಿಯೂ ನಗುತ್ತಾ ಇರುವುದೇ ಒಂದು ಸವಾಲು. ನಮಗೆ ನೋವಿದ್ದರೂ ಕೂಡ ನಾವು ನಗುತ್ತಿರಬಹುದು.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಅನೇಕ ಜನರು ಪ್ರಾಮಾಣಿಕವಾದ ಒಂದು ಒಳ್ಳೆಯ ಉದ್ದೇಶಕ್ಕಾಗಿ ಒಟ್ಟಿಗೆ ಸೇರಿದಾಗ, ವಿಶ್ವವು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಆಶೀರ್ವದಿಸುತ್ತದೆ. ಲೈಟ್ ಚಾನಲಿಂಗ್ ಸೆಷನ್‌ಗಳನ್ನು ನಡೆಸುವ ಕಾರ್ಯದಲ್ಲಿ ತೊಡಗಿಕೊಂಡಿರುವ ನಮ್ಮ ಕಾರ್ಯಕರ್ತರು 10ನೇ ವಿಶ್ವ ಚಾನಲ್ಸ್ ದಿನದಂದು ಅಂತಹ ಆಶೀರ್ವಾದದ ಅನುಭವ ಪಡೆದರು. ಬೆಳಕಿನ ಮೂಲಕ ಪ್ರೀತಿ ಮತ್ತು ಶಾಂತಿಯನ್ನು ಹರಡುವ ಈ ಕೆಲಸದ ಬಗ್ಗೆ ನಮ್ಮ ಕಾರ್ಯಕರ್ತರುಗಳಿಗಿರುವ ಶ್ರದ್ಧೆ, ಪ್ರಾಮಾಣಿಕತೆ, ಸಮರ್ಪಣಾ ಭಾವವು ವಿಶ್ವದ ಅಂತಃಕರಣವನ್ನು ಮುಟ್ಟಿರಬಹುದು, ಹಾಗಾಗಿ ವಿಶ್ವವು ಈ ಕಾರ್ಯಕರ್ತರಿಗೆ ಬಹಳಷ್ಟು ಪ್ರೀತಿ ಮತ್ತು ಸಹಾಯವನ್ನು ಕಳುಹಿಸಿತು. ಅವರ ನಿಸ್ವಾರ್ಥ ಪ್ರಯತ್ನಗಳು ಶಾಲಾ ಅಧಿಕಾರಿಗಳ ಮತ್ತು ಮಕ್ಕಳ ಮನಸ್ಸನ್ನು ಕೂಡ ಮುಟ್ಟಿರಬಹುದು, ಅವರುಗಳು ಬಹಳ ಉತ್ಸಾಹದಿಂದ ಪ್ರತಿಸ್ಪಂದಿಸಿದರು. ಈ ಕೆಲಸವನ್ನು ಹೊಸ ಹುರುಪಿನಿಂದ ಮುಂದುವರೆಸಲು ಅವರುಗಳು ನೀಡುವ ಬೆಂಬಲ ನಮ್ಮನ್ನು ಪ್ರೋತ್ಸಾಹಿಸುತ್ತದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

10ನೇ ವಿಶ್ವ ಚಾನಲ್ಸ್ ದಿನವು ಲಕ್ಷಾಂತರ ಜನರಲ್ಲಿ ಮಂದಹಾಸ ಹಾಗೂ ಹರುಷವನ್ನು ತಂದಿತು. ನಮ್ಮ ಕಾರ್ಯಕರ್ತರಿಗೆ ಹಾಗೂ ನಮ್ಮ ಮಾನಸ ಕುಟುಂಬಕ್ಕೆ ಅದೊಂದು ವಿಶೇಷವಾದ ದಿನವಾಗಿತ್ತು. ಪ್ರೀತಿ, ಶಾಂತಿ ಹಾಗೂ ಸಂತೋಷಗಳ ಅನುಗ್ರಹ ಇಡೀ ದಿನವಿತ್ತು.

10ನೇ ವಿಶ್ವ ಚಾನಲ್ಸ್ ದಿನವು ಈ ಪ್ರಪಂಚದ ಮೇಲೆ ಶಾಂತಿಯನ್ನು ತರಲು ಮಾಡಿದ ಮತ್ತೊಂದು ಪ್ರಯತ್ನವಾಗಿತ್ತು. ಇದು ಹೊಸ ಯುಗದ ಕಡೆಗಿನ ಇನ್ನೊಂದು ಹೆಜ್ಜೆಯಾಗಿತ್ತು. ಲೈಟ್ ಚಾನಲ್ ಕಾರ್ಯಕರ್ತರು ಅನೇಕ ಪವಾಡಗಳನ್ನು ಹಾಗೂ ಸಹಾಯವನ್ನು ಅನುಭವಿಸಿದರು. ಕಾಣದ ಶಕ್ತಿಯು, ನಮ್ಮ ಕಾರ್ಯಕರ್ತರ ಅನೇಕ ತೊಂದರೆಗಳನ್ನು ಮತ್ತು ಅಡೆತಡೆಗಳನ್ನು ನಿವಾರಿಸಿ, ಅವರ ಕೆಲಸಗಳನ್ನು ಮಾಡಲು ಅವರಿಗೆ ಸಹಾಯ ಮಾಡಿತು.

ಲೈಟ್ ಚಾನಲ್ಸ್ ವಿಶ್ವ ಸಂಚಲನಕ್ಕೆ ಯಾವುದೇ ಶರತ್ತಿಲ್ಲದೆ ಬೆಂಬಲಿಸಿದ ಶಾಲಾ ಅಧಿಕಾರಿಗಳಿಗೆ, ಪ್ರಾಂಶುಪಾಲರುಗಳಿಗೆ, ಶಿಕ್ಷಕರುಗಳಿಗೆ, ವಿದ್ಯಾರ್ಥಿಗಳಿಗೆ ಹಾಗೂ ಇತರೆ ಲೈಟ್ ಚಾನಲ್‌ಗಳಿಗೆ ನಾವು ಧನ್ಯವಾದಗಳನ್ನರ್ಪಿಸುತ್ತೇವೆ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.
ಫೋನ್: (080) 2846 5280, 99000 75280 (10am to 5pm), ಇ–ಮೇಲ್: info@lightagemasters.com
website : www.lightagemasters.com, www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಾಗಿಲ್ಲ.

### ಬೆಂಗಳೂರು

**ಸೋಮವಾರದಿಂದ ಶುಕ್ರವಾರದವರೆಗೆ (ಸಂಜೆ 7 - 7.15)**
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ
ಶ್ರೀ ಕೆ. ಚಂದ್ರಶೇಖರ್
☎ 9084121545

**ಸೋಮವಾರ (ಸಂಜೆ 6.30 - 7)**
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
ಶ್ರೀಮತಿ ಅಂಜಲಿ ಪಾಟೀಲ್ ಕೆ.
☎ 9972111809

**ಬುಧವಾರ (ಸಂಜೆ 6.30 - 7)**
ಮಾರುತಿ ಮಂದಿರ, ವಿಜಯನಗರ
ಶ್ರೀಮತಿ ಅಂಜಲಿ ಪಾಟೀಲ್ ಕೆ.
☎ 9972111809

**ಶುಕ್ರವಾರ (ಸಂಜೆ 6.30 - 7)**
39, 1ನೇ ಮಹಡಿ, 6ನೇ ಅಡ್ಡರಸ್ತೆ, ಎಲ್ಐಸಿ ಕಾಲೋನಿ, 3ನೇ ಬ್ಲಾಕ್ ಪೂರ್ವ ಜಯನಗರ
ಶ್ರೀ ರಮೇಶ್ ವಿ ಭೋಸೆಕರ್
☎ 9900110351

**ಶುಕ್ರವಾರ (ಮಧ್ಯಾಹ್ನ 12.00)**
ಸಿದ್ಧಿ ವಿನಾಯಕ ದೇವಸ್ಥಾನ, 59/1, ಹಚಿನ್ಸ್ ರಸ್ತೆ, 3ನೇ ಅಡ್ಡರಸ್ತೆ, ಕೂಕ್ ಟೌನ್
ಶ್ರೀಮತಿ ನಿರ್ಮಲ ಬಾಲ
☎ 9980205803

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ಬರೆಯಿರಿ.



2020ರ ವಿಶ್ವ ಚಾನಲ್ಸ್ ದಿನದ ಯಶಸ್ವಿನ ಸಂಭ್ರಮಾಚರಣೆಯಲ್ಲಿ ಭಾಗವಹಿಸಿದ ಕಾರ್ಯಕರ್ತರು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಪ್ರಪಂಚದ ಯಾವುದೇ ಭಾಗದಲ್ಲಿ ಯಾವುದೇ ಸಂಕಟ, ಯಾವುದೇ ಸಮಸ್ಯೆ, ಯಾವುದೇ ನೋವಿದ್ದಾಗ ನಾವು ಸುಖವಾಗಿರಲು ಸಾಧ್ಯವಾಗುವುದಿಲ್ಲ. ನಾವು ಅಸಹಾಯಕರಾಗಿರಬಹುದು, ನಾವು ಏನನ್ನೂ ಮಾಡಲಾಗದೇ ಇರಬಹುದು, ಆದರೆ ನಮ್ಮದೇ ಆದ ರೀತಿಯಲ್ಲಿ ಪ್ರತಿಕ್ರಿಯಿಸಬಹುದು. ಕೊನೆಯ ಪಕ್ಷ ಪ್ರಾರ್ಥನೆ ಮಾಡಬಹುದು.
- ನಾವು, ಧ್ಯಾನ ಮಾಡಿ ಪ್ರಜ್ಞಾಪೂರ್ವಕವಾಗಿ ಸಕಾರಾತ್ಮಕರಾಗುವುದರ ಮೂಲಕ ನಮ್ಮ ಪರಿಶುದ್ಧತೆಯ ಮಟ್ಟಗಳನ್ನು ಉತ್ತಮಗೊಳಿಸಿದರೆ ಆಗ ನಮ್ಮ ಒಳಅರಿವು (intuition) ಕೆಲಸಮಾಡುತ್ತದೆ, ಅದು ಚುರುಕುಗೊಳ್ಳುತ್ತದೆ. ಅದು ನಮಗೆ ತಪ್ಪು ವಿಷಯಗಳನ್ನು ಹೇಳುವುದೇ ಇಲ್ಲ.
- ಬೆಳಕಿನ ಮೂಲಕ ನಾವು ಜ್ಞಾನವನ್ನು ಪಡೆಯುತ್ತೇವೆ, ವಿವೇಕವನ್ನು ಪಡೆಯುತ್ತೇವೆ ಹಾಗೂ ವಿಶೇಷವಾದ ಚೈತನ್ಯಗಳನ್ನು ಪಡೆಯುತ್ತೇವೆ.
- ನಾವು ಆತ್ಮಗಳು, ನಮ್ಮಲ್ಲೇನಿದೆಯೋ ಅದು ಎಲ್ಲರಲ್ಲಿಯೂ ಇದೆ. ನನ್ನಲ್ಲಿ ದೈವತ್ವವಿದ್ದರೆ, ಬೇರೆಲ್ಲರಲ್ಲೂ ದೈವತ್ವವಿದೆ.
- ಕರ್ಮಗಳ ನಿಯಮಗಳಿವೆ. ನಾನು ಅವುಗಳನ್ನು ಉಲ್ಲಂಘಿಸಿ ಬೇರೆಯವರಿಗೆ ನೋವುಂಟು ಮಾಡಿದರೆ, ಸ್ವಲ್ಪ ಸಮಯದ ನಂತರ ಅದು ನನಗೆ ವಾಪಸ್ಸು ಬರುತ್ತದೆ. ಅದರ ಫಲ ನನಗೆ ವಾಪಸ್ಸು ಬರುತ್ತದೆ, ಈ ಜನ್ಮದಲ್ಲಿಯಲ್ಲದಿದ್ದರೂ ಬೇರೊಂದು ಜನ್ಮದಲ್ಲಿ ಅದರ ಫಲವನ್ನು ನಾನು ಅನುಭವಿಸಲೇಬೇಕಾಗುತ್ತದೆ.
- ಕರ್ಮಗಳ ನಿಯಮಗಳ ಬಗ್ಗೆ ಜನರಲ್ಲಿ ಅರಿವುಂಟಾದಾಗ, ಅವರು ತಪ್ಪುಗಳನ್ನು ಮಾಡುವುದಿಲ್ಲ. ನಮ್ಮಲ್ಲಿ ಪ್ರತಿಯೊಬ್ಬರ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲಾಗುತ್ತದೆ, ಎಚ್ಚರಿಕೆಯಿಂದ ಗಮನಿಸಲಾಗುತ್ತದೆ ಎನ್ನುವುದು ನಮಗೆ ತಿಳಿದಿರಬೇಕು. ಉನ್ನತವಾದ ಬುದ್ಧಿಶಕ್ತಿಯೊಂದಿದೆ, ದೇವರಿದ್ದಾನೆ.
- ಶರಣಾಗತಿ ಎಂದರೆ, ನಮ್ಮ ಅಹಂಅನ್ನು ಸಂಪೂರ್ಣವಾಗಿ ಬಿಡುವುದು ಮತ್ತು ದೈವೇಚ್ಛೆಗೆ ನಮ್ಮಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಡುವುದು.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5758 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 29.65 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | : | 1269 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | : | 5.24 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

# ಹತ್ತನೇ ವಿಶ್ವ ಚಾನಲ್ಸ್ ದಿನ

**ಮನೋಜ್ ಚೋಪ್ರ; ಅನು: ಸುಜಾತ ರಾಮರಾವ್**

ಎಲ್ಲಾ ಕ್ರಾಂತಿಗಳು ಒಬ್ಬ ವ್ಯಕ್ತಿಯಿಂದ ಶುರುವಾಗುತ್ತವೆ. ಮೇ 18, 2008ರಲ್ಲಿ ಗುರೂಜಿ ಕೃಷ್ಣಾನಂದರಿಂದ ಬೆಳಕಿನ ಕ್ರಾಂತಿ ಪ್ರಾರಂಭಗೊಂಡಿತು. ಇದು ಒಂದು ಆಧ್ಯಾತ್ಮಿಕ ಕ್ರಾಂತಿ. ಆಧ್ಯಾತ್ಮಿಕ ಕ್ರಾಂತಿಗಳು ಯಾವಾಗಲೂ ಸದ್ದು ಮಾಡುವುದಿಲ್ಲ ಮತ್ತು ಉದ್ದೇಶಪೂರ್ವಕವಾಗಿಯೇ ಅವುಗಳನ್ನು ಪ್ರಚಾರದಿಂದ ಹೊರಗೆ ಇಡಲಾಗುತ್ತದೆ. ಕೆಲವರು ಲೈಟ್ ಚಾನಲಿಂಗ್ ಬಗ್ಗೆ ಅರಿವನ್ನು ಮೂಡಿಸಲು ಮುಂದಾದರು. ಅವರು ನೇರವಾಗಿ ಜನರನ್ನು ಹಾಗೂ ಗುಂಪುಗಳನ್ನು ಸಂಪರ್ಕಿಸಿದರು. ಅವರೆಲ್ಲರು ಸೇರಿಕೊಂಡು ಕೆಲವು ಸಮಯ ಲೈಟ್ ಚಾನಲಿಂಗ್ ಮಾಡಿದ ನಂತರ, ಈ ಕೆಲಸವನ್ನು ಆರಂಭಿಸಿದರು. ನಾವು 2009ರಲ್ಲಿ ಶಾಲೆಯ ಮಕ್ಕಳಿಗೆ ಲೈಟ್ ಚಾನಲಿಂಗ್ ಕಲಿಸಲು ಶುರು ಮಾಡಿದ ನಂತರ ಈ ಕೆಲಸದ ವೇಗವು ಹೆಚ್ಚಿತು. 2011 ರಿಂದ, ನಾವು ಪ್ರತಿ ವರ್ಷ ವಿಶ್ವ ಚಾನಲ್ಸ್ ದಿನವನ್ನು ಆಚರಿಸಲು ಆರಂಭಿಸಿದೆವು. ಆ ದಿನವು ಪ್ರೀತಿ, ಶಾಂತಿ ಮತ್ತು ಏಕತೆಯ ಭಾವವನ್ನು ಹರಡುವ ದಿನವಾಗಿದೆ.

ಹತ್ತನೇ ವಿಶ್ವ ಚಾನಲ್ಸ್ ದಿನವು ಪ್ರಕ್ಷುಬ್ಧತೆಯಿಂದ ಕದಡಿಹೋಗಿರುವ ಪ್ರಪಂಚಕ್ಕೆ ಶಾಂತಿಯ ಅಲೆಗಳನ್ನುಂಟುಮಾಡುವ ಮತ್ತೊಂದು ಪ್ರಯತ್ನವಾಗಿತ್ತು. ಅದು 150ಕ್ಕೂ ಹೆಚ್ಚು ಕಾರ್ಯಕರ್ತರ ಶಿಸ್ತಿನ ಪ್ರಯತ್ನವಾಗಿತ್ತು. 25ನೇ ಡಿಸೆಂಬರ್ 2019ರಂದು ಹತ್ತನೇ ವಿಶ್ವ ಚಾನಲ್ಸ್ ದಿನದ ಯೋಜನೆ ಆರಂಭವಾಯಿತು. ಆಯಾ ಪ್ರದೇಶದ ಸಂಯೋಜಕರು ಅವರವರ ಪ್ರದೇಶದ ಯೋಜನೆಯನ್ನು ಅಂತಿಮಗೊಳಿಸುವ ಕಾರ್ಯವನ್ನು ಪ್ರಾರಂಭಿಸಿದರು. ಕಾರ್ಯಕರ್ತರ ಲಭ್ಯತೆ ಮತ್ತು ಅವರ ಸಮಯಕ್ಕೆ ಅನುಗುಣವಾಗಿ ಕೆಲಸವನ್ನು ನಿಯೋಜಿಸಲಾಯಿತು. ಕೆಲವು ಹಿರಿಯ ಕಾರ್ಯಕರ್ತರಿಗೆ ಹೆಚ್ಚು ಜವಾಬ್ದಾರಿಗಳನ್ನು ಕೊಡಲಾಯಿತು.

ಜನವರಿ 2020ರ ಮೊದಲನೆಯ ವಾರದಲ್ಲಿ, ಸುಮಾರು ಎಲ್ಲಾ ತಂಡಗಳು ತಮ್ಮ ಯೋಜನೆಗಳನ್ನು ಅಂತಿಮಗೊಳಿಸಿ ಅದರಂತೆ ಕಾರ್ಯ ನಿರ್ವಹಿಸಲು ಪ್ರಾರಂಭಿಸಿದರು. ನಮ್ಮ ಕಾರ್ಯಕರ್ತರು ಸಾವಿರಕ್ಕೂ ಹೆಚ್ಚಿನ ಶಾಲೆಗಳಿಗೆ ಭೇಟಿ ನೀಡಿ ಶಾಲಾ ಅಧಿಕಾರಿಗಳಿಗೆ ವಿಶ್ವ ಲೈಟ್ ಚಾನಲ್ಸ್ ದಿನದ ಬಗ್ಗೆ ಮಾಹಿತಿಯನ್ನು ಕೊಟ್ಟರು. ಆ ದಿನ ತಮ್ಮ ಶಾಲೆಗಳಲ್ಲಿ ಲೈಟ್ ಚಾನಲಿಂಗ್ ಸೆಷನ್‌ಅನ್ನು ಆಯೋಜಿಸುವುದರ ಮೂಲಕ ನಮ್ಮ ಜೊತೆಗೂಡಲು ಅವರಿಗೆ ಮನವಿ ಮಾಡಿಕೊಂಡರು. ಹೆಚ್ಚು ಶಾಲೆಗಳು ಸಂತೋಷದಿಂದ ನಮ್ಮ ಮನವಿಯನ್ನು ಒಪ್ಪಿಕೊಂಡು ವಿಶ್ವ ಚಾನಲ್ಸ್ ದಿನದಂದು ನಮ್ಮ ಜೊತೆ ಸೇರುವುದಾಗಿ ಭರವಸೆ ಕೊಟ್ಟರು. ಮನವಿಯ ಪತ್ರಗಳನ್ನು ದೂರ ಪ್ರದೇಶಗಳಲ್ಲಿರುವ ಹಲವಾರು ಶಾಲೆಗಳಿಗೆ ಪೋಸ್ಟ್ ಮಾಡಲಾಯಿತು. ನೂರಾರು ಶಾಲೆಗಳಿಗೆ ದೂರವಾಣಿಯ ಮೂಲಕ ಕರೆ ಮಾಡಿ ವಿಶ್ವ ಚಾನಲ್ಸ್ ದಿನದ ಬಗ್ಗೆ ತಿಳಿಸಲಾಯಿತು. ಶಾಲಾ ಅಧಿಕಾರಿಗಳಿಂದ ಬಂದ ಪ್ರತಿಕ್ರಿಯೆ ಅದ್ಭುತವಾಗಿತ್ತು ಏಕೆಂದರೆ ಅವರು ಈ ಅವಕಾಶಕ್ಕಾಗಿ ಕಾಯುತ್ತಿದ್ದರು. ನಮ್ಮ ಕಾರ್ಯಕರ್ತರು ಶಾಲೆಗಳನ್ನು ಭೇಟಿ ಮಾಡಿದಾಗ, ಅವರಿಗೆ ಆತ್ಮೀಯವಾದ ಸ್ವಾಗತವನ್ನು ನೀಡಲಾಯಿತು. ಅವರಿಗೆ ಪಾನೀಯ ಮತ್ತು ಕೆಲವೊಮ್ಮೆ ಉಪಹಾರ ಅಥವಾ ಊಟವನ್ನು ನೀಡಲಾಯಿತು.

ಹತ್ತನೇ ವಿಶ್ವ ಚಾನಲ್ಸ್ ದಿನವು ಅತ್ಯುನ್ನತವಾಗಿ ಯಶಸ್ವಿಯಾಯಿತು. ಆ ದಿನ, ಬೆಳಿಗ್ಗೆ 6 ಗಂಟೆಗೆ ನಮ್ಮ ಮಾಸ್ಟರ್‌ಗಳಿಗೆ ಪ್ರಾರ್ಥನೆ ಸಲ್ಲಿಸಿದ ನಂತರ 7 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡುವುದರೊಂದಿಗೆ ಅತ್ಯಂತ ಶಾಂತಿಯುತವಾಗಿ ಆರಂಭವಾಯಿತು. ಬೆಳಿಗ್ಗೆ 7 ರಿಂದ 11ರೊಳಗೆ ಸಾವಿರಾರು ಸೆಷನ್‌ಗಳನ್ನು ಭಾರತದ ಎಲ್ಲಾ ಕಡೆ ನಡೆಸಲಾಯಿತು. ಮಧ್ಯಾಹ್ನ ಮತ್ತು ಸಾಯಂಕಾಲ ಕೂಡ ಹಲವಾರು ಸೆಷನ್‌ಗಳನ್ನು ನಡೆಸಲಾಯಿತು. ಪುಣೆಯ ತಂಡದವರು ಒಂದು ಕಾಲೇಜಿನಲ್ಲಿ ಸಾಯಂಕಾಲದ ಒಂದು ಸೆಷನ್ ಮಾಡುವುದರೊಂದಿಗೆ ಸಂಜೆ 6.30ಕ್ಕೆ ಆ ದಿನ ಮುಕ್ತಾಯಗೊಂಡಿತು. ಸಮರ್ಪಣಾ ಭಾವದಿಂದ ಕಾರ್ಯಕರ್ತರು 300ಕ್ಕೂ ಹೆಚ್ಚು ಶಾಲೆಗಳಲ್ಲಿ ಸೆಷನ್‌ಗಳನ್ನು ನಡೆಸಿಕೊಟ್ಟರು. ಸುಮಾರು 2 ಲಕ್ಷ ಮಕ್ಕಳು ಆ ಸೆಷನ್‌ಗಳಲ್ಲಿ ಬೆಳಕನ್ನು ಚಾನಲ್ ಮಾಡಿದರು ಎಂಬ ವಿಷಯ ಆಶ್ಚರ್ಯವುಂಟುಮಾಡಿತು. ಈ 2 ಲಕ್ಷ ಮಕ್ಕಳಲ್ಲದೆ, ಶಾಲೆಯವರೇ ಸ್ವತಃ ನಡೆಸಿದ ಸೆಷನ್‌ಗಳಲ್ಲಿ 2000ಕ್ಕಿಂತ ಹೆಚ್ಚು ಶಾಲೆಗಳಲ್ಲಿ 8 ಲಕ್ಷಕ್ಕಿಂತ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡಿದರು. 2300 ಶಾಲೆಗಳು ಮತ್ತು ಸಂಸ್ಥೆಗಳಿಂದ ದಶಲಕ್ಷಕ್ಕಿಂತ ಹೆಚ್ಚು ಮಕ್ಕಳು ಮತ್ತು ವಯಸ್ಕರು ಬೆಳಕನ್ನು ಚಾನಲ್ ಮಾಡಿದರು. ಬೆಂಗಳೂರು, ತುಮಕೂರು, ಚೆನ್ನೈ, ಮಧುರೈ, ಹೈದರಾಬಾದ್, ವಿಶಾಖಪಟ್ಟಣಂ, ಉದಯಪುರ, ಮುಂಬೈ, ಪುಣೆ, ಸಾಂಗ್ಲಿ, ಅಮರಾವತಿ ಮತ್ತು ಭಾರತದ ಇತರ ಭಾಗಗಳಲ್ಲಿ ಲೈಟ್ ಚಾನಲಿಂಗ್ ಸೆಷನ್‌ಗಳು ನಡೆದವು.

ಸ್ವಾಮಿ ವಿವೇಕಾನಂದರ ಮಾತುಗಳು ನಮ್ಮ ಲೈಟ್ ಚಾನಲಿಂಗ್ ಕೆಲಸಕ್ಕೆ ಅತ್ಯಂತ ಸೂಕ್ತವಾಗಿದೆ. "ನಮಗೆ ಅಪಾರ ಚೈತನ್ಯ, ಅಪಾರ ಉತ್ಸಾಹ, ಅಪಾರ ಧೈರ್ಯ ಮತ್ತು ಅಪಾರ ತಾಳ್ಮೆ ಬೇಕು, ಆಗಷ್ಟೇ ಮಹಾನ್ ಕೆಲಸಗಳನ್ನು ಸಾಧಿಸಬಹುದು." ಎಂದು ಅವರು ಹೇಳಿದ್ದಾರೆ. ನಮ್ಮ ಕಾರ್ಯಕರ್ತರಲ್ಲಿ ಇವೆಲ್ಲವೂ ಇವೆ. ಅವರಿಗೆ ಕೆಲಸದ ಮೇಲೆ ಅದ್ಭುತವಾದ ಪ್ರೀತಿ ಇದೆ, ಸವಾಲುಗಳಿದ್ದರೂ ವರ್ಷದಿಂದ ವರ್ಷಕ್ಕೆ ಈ ಸಂಚಲನವು ಹೆಚ್ಚು ಹೆಚ್ಚಾಗಿ ಹರಡುವುದಕ್ಕೆ ಅವರ ಪ್ರೀತಿ ಸಹಾಯಮಾಡುತ್ತಿದೆ.

ಎಲ್ಲಾ ಮಕ್ಕಳಿಗೆ, ಶಾಲಾ ಅಧಿಕಾರಿಗಳಿಗೆ ನಾವು ಕೃತಜ್ಞರಾಗಿದ್ದೇವೆ ಮತ್ತು ಈ ಪ್ರಪಂಚವನ್ನು ಶಾಂತಿಯುತವಾದ ಸ್ಥಳವನ್ನಾಗಿ ಮಾಡುವ ನಮ್ಮ ಪ್ರಯತ್ನಗಳಿಗೆ ಬೆಂಬಲ ನೀಡಿದ ಎಲ್ಲಾ ಬೆಳಕಿನ ಚಾನಲ್‌ಗಳಿಗೆ ಕೃತಜ್ಞರಾಗಿದ್ದೇವೆ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ಸಹಾಯ ಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿ ಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳ ಬಹುದು.

### ಸೋಲಾಪೂರ್

**ಸೋಮವಾರ ಮತ್ತು ಗುರುವಾರ**
**(ಸಂಜೆ 7 - 7.15)**

ಬಾಲಗಣೇಶ್ ಮಂದಿರ, ಬುಶರ್ ಪೇಠ್, ಮೊಹೋಲ್

☎ 09860967066 ಶ್ರೀ ವಿವೇಕಾನಂದ ಸ್ವಾಮಿ
☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

**ಶನಿವಾರ (ಬೆಳಿಗ್ಗೆ 10 - 10.30)**

ನಂ. 481, ಸಾಯಿಪ್ರೇಮ್, 19ನೇ ರಸ್ತೆ, 4ನೇ ಸೆಕ್ಟರ್, ಕೆ. ಕೆ. ನಗರ

☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್


### ಪುಣೆ

**ಶನಿವಾರ (ಸಂಜೆ 7 - 7.30)**

3-B, ಕಪಿಲ ಹೌಸಿಂಗ್ ಸೊಸೈಟಿ, ಗೋಖಲೆನಗರ

☎ 9011038169 ಶ್ರೀ ಆಶುತೋಶ್ ನವನ್‌ಗುಲ್

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯ ಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವ ಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



## ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಸುಜಾತ ರಾಮರಾವ್

28ನೇ ಜುಲೈ 2019 ರಂದು ಪೈಠನ್‌ನಲ್ಲಿ ಎರಡು ಲೈಟ್ ಚಾನಲಿಂಗ್ ಸೆಷನ್‌ಗಳನ್ನು ನಡೆಸಿದೆವು. ಆ ಸೆಷನ್‌ಗಳ ನಂತರ ಎರಡು ಸಂಗತಿಗಳು ನಡೆದವು. ಒಂದು, ಪೈಠನ್‌ನಲ್ಲಿ ವಾಸವಿದ್ದು ಅಲ್ಲೇ ಕೆಲಸ ಮಾಡುತ್ತಿರುವ ನನ್ನ ಸಹೋದ್ಯೋಗಿ ತುಷ್ಯಾರ್ ಕಿಷ್ಟಿ ನಿಯತವಾಗಿ ಬೆಳಕನ್ನು ಚಾನಲ್ ಮಾಡಲು ಪ್ರಾರಂಭಿಸಿದರು, ಅದು ಬೆಳಕಿನ ಕೃಪೆಯಿಂದೇ ನಾನು ನಂಬಿದ್ದೇನೆ. ಎರಡು, ನಾಥ್‌ಸಾಗರ್ ಅಣೆಕಟ್ಟಿನ ಜಲಾನಯನ ಪ್ರದೇಶದಾದ್ಯಂತ ಮಳೆ ಬೀಳಲು ಶುರುವಾಯಿತು. ಈಗ ಅಣೆಕಟ್ಟು ಶೇ 75 ರಷ್ಟು ಭರ್ತಿಯಾಗಿದೆ. ಆದರೆ ಇದಕ್ಕೆ ಪ್ರತಿಯಾಗಿ, ಕಳೆದ ವರ್ಷ ಪೈಠನ್‌ನಲ್ಲಿ ತೀವ್ರ ಬರವಿತ್ತು.

–ಸಂತೋಷ್ ಕೋರೆ, ಕಾರ್ಯಕರ್ತ

ಜಿಕೆಎಮ್‌ಪಿ ಶಾಲೆಯಲ್ಲಿ ನಾವು ಲೈಟ್ ಚಾನಲಿಂಗ್ ಸೆಷನ್‌ಅನ್ನು ನಡೆಸುತ್ತಿದ್ದಾಗ, ಮಕ್ಕಳು ಬಹಳ ಶಿಸ್ತಿನಿಂದ ಇರುವುದನ್ನು ಗಮನಿಸಿದೆ. ಎಲ್ಲರೂ ಕ್ರಮವಾದ ರೀತಿಯಲ್ಲಿ ಸಾಲುಸಾಲಾಗಿ ಮೌನದಿಂದ ಕುಳಿತಿದ್ದರು. ಅವರು ಸರಾಗವಾಗಿ ಉತ್ತರಿಸುತ್ತಿದ್ದರು ಮತ್ತು ಪ್ರತಿಕ್ರಿಯಿಸುತ್ತಿದ್ದರು. ಶಿಕ್ಷಕರು ಹೆಚ್ಚು ಉತ್ಸಾಹದಿಂದ ಭಾಗವಹಿಸಿದರು.

–ನಿರ್ಮಲ ಬಾಲ, ಕಾರ್ಯಕರ್ತೆ

ಬೆಳಗಿನ ಅಸೆಂಬ್ಲಿ ಸೆಷನ್‌ಗಳಲ್ಲಿ ವಿದ್ಯಾರ್ಥಿಗಳು ಯಾವತ್ತೂ ಹೀಗೆ ಕುಳಿತಿರಲಿಲ್ಲ. ಈ ದಿನ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಅವರು ಬಹಳ ಪ್ರಶಾಂತವಾಗಿದ್ದರು.

–ಪ್ರಾಂಶುಪಾಲಕರು, ವೀರ್ ಬಾಜಿ ಪಸಲ್ಕರ್ ವಿದ್ಯಾ, ನಂ. 1, ಸಸ್ವಾಡ್, ಪುರಂದರ್, ಪುಣೆ.

ಲೈಟ್ ಚಾನಲಿಂಗ್ ಒಂದು ಒಳ್ಳೆಯ ತಂತ್ರ. ಇದು ಇಡೀ ಜೀವನಕ್ಕೆ ಬೆಳಕು ತರುತ್ತದೆ. ನಾವು ಈ ತಂತ್ರವನ್ನು ಮನೆಯಲ್ಲಿ ಕೂಡ ಅಭ್ಯಾಸ ಮಾಡುತ್ತೇವೆ.

–ಪ್ರಾಂಶುಪಾಲಕರು, ಜಿಲ್ಲಾ ಪರಿಷತ್ ಪ್ರಾಥಮಿಕ ಶಾಲೆ, ಸುಪೆಕರ್ಥ್, ಪಿಂಪಲೆ, ಪುರಂದರ್, ಪುಣೆ

ಕೆಲವೊಮ್ಮೆ ಮನೆಯಲ್ಲಿ ಓದುವಾಗ, ಅನೇಕ ಪ್ರಶ್ನೆಗಳು ನನ್ನ ಮನಸ್ಸಿನಲ್ಲೇಳುತ್ತವೆ, ತದನಂತರ ತಲೆ ನೋವು ಬರುತ್ತದೆ. ಅಂತಹ ಸಮಯಗಳಲ್ಲಿ ನಾನು ಲೈಟ್ ಚಾನಲ್ ಮಾಡುತ್ತೇನೆ. ನನ್ನ ಮನಸ್ಸು ಮತ್ತು ತಲೆ ಪ್ರಶಾಂತವಾಗುತ್ತದೆ ಮತ್ತು ಓದುವುದಕ್ಕೆ ಸ್ಫೂರ್ತಿ ಬರುತ್ತದೆ.

–ಅಂತರ ಅಂಕುಶ್ ಕಾಕಡೆ, 9ನೇ ತರಗತಿ, ಅಹಿಲ್ಯಾದೇವಿ ಹೈಸ್ಕೂಲ್, ಪುಣೆ

ನಾನು ಬೆಳಕನ್ನು ಚಾನಲ್ ಮಾಡುತ್ತೇನೆ ಮತ್ತು ಚಾನಲ್ ಮಾಡುವಾಗ ಪ್ರಶಾಂತತೆಯನ್ನು ಅನುಭವಿಸುತ್ತೇನೆ, ಆದಕಾರಣದಿಂದಾಗಿ ನನಗದು ಬಹಳ ಪ್ರಿಯವಾಗಿದೆ. ನನ್ನ ಆತ್ಮ ವಿಶ್ವಾಸ ಹೆಚ್ಚಾಗಿದೆ.

–ವೈಶಾಲಿ, 9ನೇ ತರಗತಿ, ಅಹಿಲ್ಯಾದೇವಿ ಹೈಸ್ಕೂಲ್, ಪುಣೆ

ಲೈಟ್ ಚಾನಲ್ ಮಾಡಿದ ನಂತರ ತುಂಬಾ ಚೆನ್ನಾಗಿರುತ್ತದೆ. ಶಿಕ್ಷಕರು ಕಲಿಸುವುದನ್ನು ಹಾಗೂ ಅವರು ಕೇಳುವ ಪ್ರಶ್ನೆಗಳನ್ನು ನೆನಪಿಟ್ಟುಕೊಳ್ಳುತ್ತೇನೆ ಮತ್ತು ಲವಲವಿಕೆಯಿಂದಿರುತ್ತೇನೆ. ಲೈಟ್ ಚಾನಲ್ ಮಾಡುವುದರಿಂದ ನನ್ನಲ್ಲಿ ಸುಧಾರಣೆಯಾಗಿದೆ ಅನಿಸುತ್ತದೆ.

–ಹಿಮ ತುಪೆ, 9ನೇ ತರಗತಿ, ಅಹಿಲ್ಯಾದೇವಿ ಹೈಸ್ಕೂಲ್, ಪುಣೆ

ಲೈಟ್ ಚಾನಲ್ ಮಾಡಿದ ನಂತರ ನನಗೆ ಓದುವುದಕ್ಕೆ ಆಸಕ್ತಿ ಬರುತ್ತದೆ ಮತ್ತು ಹೆಚ್ಚು ಓದಬೇಕೆನಿಸುತ್ತದೆ. ಕೋಪ ಮತ್ತು ಕಿರಿಕಿರಿ ಕಡಿಮೆಯಾಗಿದೆ. ನಾನು ಉಲ್ಲಾಸದಿಂದಿರುತ್ತೇನೆ. ನನ್ನಲ್ಲಿ ಬದಲಾವಣೆಯಾಗಿದೆ.

–ಉತ್ಕರ್ಷ ಗಾಯಕ್‌ವಾಡ್, 9ನೇ ತರಗತಿ, ಅಹಿಲ್ಯಾದೇವಿ ಹೈಸ್ಕೂಲ್, ಪುಣೆ

ಲೈಟ್ ಚಾನಲ್ ಮಾಡಲು ಪ್ರಾರಂಭಿಸಿದಂದಿನಿಂದ ನನಗೆ ತರಗತಿಯಲ್ಲಿ ತೂಕಡಿಕೆ ಬರುವುದಿಲ್ಲ. ಹುರುಪಿನಿಂದ ಕೂಡಿರುತ್ತೇನೆ. ಈ ತಂತ್ರವನ್ನು ನನ್ನ ತಾಯಿಗೂ ಕಲಿಸಿದ್ದೇನೆ.

–ಕೋಮಲ್ ಜೀವನ್ ಪವಾರ್, 9ನೇ ತರಗತಿ, ಅಹಿಲ್ಯಾದೇವಿ ಹೈಸ್ಕೂಲ್, ಪುಣೆ

ಲೈಟ್ ಚಾನಲ್ ಮಾಡಲು ಪ್ರಾರಂಭಿಸಿದ ನಂತರ ನನ್ನಲ್ಲಿ ಬದಲಾವಣೆಯನ್ನು ಕಂಡಿದ್ದೇನೆ; ನನ್ನ ಮನಸ್ಸು ಶಾಂತವಾಗಿದೆ. ಮುಂಚೆ ನನಗೆ ಓದುವ ಕಡೆ ಗಮನ ಹರಿಸಲು ಸಾಧ್ಯವಾಗುತ್ತಿರಲಿಲ್ಲ, ಆದರೆ ಈಗ ಸಾಧ್ಯವಾಗುತ್ತಿದೆ.

–ಗೌರಿ ಕೊಲಮ್‌ಬಡೆ, 9ನೇ ತರಗತಿ, ಅಹಿಲ್ಯಾದೇವಿ ಹೈಸ್ಕೂಲ್, ಪುಣೆ

ವಿಶ್ವ ಚಾನಲ್ಸ್ ದಿನವಾದ ಜನವರಿ 31, 2020ರಂದು
ಹತ್ತು ಲಕ್ಷಕ್ಕೂ ಹೆಚ್ಚು ಜನರು ಬೆಳಕನ್ನು ಚಾನಲ್ ಮಾಡಿದರು.
**ನಿಮಗೆಲ್ಲರಿಗೂ ವಂದನೆಗಳು.**

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ